**ಎರಡನೆಯ ಪ್ರಶ್ನೆ:** ಭಾರ್ಗವ ವೈದರ್ಭಿಯು ಎರಡನೆಯ ಪ್ರಶ್ನೆಯನ್ನು ಕೇಳುತ್ತಾನೆ: **“ಪೂಜ್ಯರೆ, ಎಷ್ಟು ದೇವತೆಗಳು ಶರೀರವನ್ನು ಧರಿಸಿಕೊಂಡಿರುತ್ತಾರೆ ? ಇದನ್ನು ಪ್ರಕಾಶಗೊಳಿಸುವವರು ಯಾರು? ಇವರಲ್ಲಿ ಶ್ರೇಷ್ಠರು ಯಾರು?”**

ಸ್ಥೂಲ ಶರೀರಕ್ಕೂ ಹಾಗೂ ಚೈತನ್ಯರೂಪ ಪ್ರಾಣಕ್ಕೂ ಇರುವ ಸಂಬಂಧ ಇಲ್ಲಿ ವ್ಯಕ್ತವಾಗುತ್ತದೆ. ಶರೀರದ ರಚನೆಗೆ ಕಾರಣವಾದ ಪಂಚಭೂತಗಳು, ಈ ಶರೀರವನ್ನು ಧರಿಸಿರುವುದು ತಾವೇ ಎಂದು ಗರ್ವ ತಾಳುತ್ತವೆ. ಆಗ ಇಂದ್ರಿಯಗಳು ತಾವೇ ಶರೀರಧಾರಣೆಗೆ ಕಾರಣವಾಗಿರುವೆವು ಎನ್ನುತ್ತವೆ. ಆಗ ಮುಖ್ಯಪ್ರಾಣನು, “ನಾನೇ ನನ್ನನ್ನು ಐದು ಭಾಗವಾಗಿ ವಿಭಜಿಸಿಕೊಂಡು ಈ ಶರೀರವನ್ನು ಧರಿಸಿರುವೆನು” ಎನ್ನುವನು. ಆದರೆ ಉಳಿದವು ಈ ಮಾತನ್ನು ಒಪ್ಪುವುದಿಲ್ಲ. ಪಂಚಭೂತಗಳು ಹಾಗೂ ಇಂದ್ರಿಯಗಳಿಗೆ ಅರಿವನ್ನು ಉಂಟುಮಾಡಲು ಮುಖ್ಯಪ್ರಾಣನು ತಾನೇ ನಿರ್ಗಮಿಸಲು ಮೇಲೇಳುತ್ತಾನೆ. ಆಗ ಉಳಿದವು ಕೂಡ ತಮಗೆ ಅರಿವಿಲ್ಲದಂತೆ ಅವನೊಡನೆ ಮೇಲೆ ಎದ್ದವು; ಅವನು ನಿಂತೊಡನೆ ತಾವೂ ನಿಂತವು.

ಹೀಗೆ ಮುಖ್ಯಪ್ರಾಣದ ಶ್ರೇಷ್ಠತೆಯ ಜ್ಞಾನವನ್ನು ಪಡೆದ ಪಂಚಭೂತಗಳು ಹಾಗೂ ಇಂದ್ರಿಯಗಳು ಮುಖ್ಯಪ್ರಾಣನನ್ನು ಹೀಗೆ ಸ್ತುತಿಸತೊಡಗಿದವು: “ನೀನೇ ಅಗ್ನಿ, ಸೂರ್ಯ, ಪರ್ಜನ್ಯ, ಇಂದ್ರ, ವಾಯು, ಪೃಥ್ವಿ, ರಯಿ, ದೇವ, ಮೂರ್ತ, ಅಮೃತ – ಹೀಗೆ ಎಲ್ಲವೂ ನೀನೇ ಆಗಿರುವೆ. ಎಲ್ಲವೂ ನಿನ್ನಲ್ಲೇ ಪ್ರತಿಷ್ಠಿತವಾಗಿರುವುದು. ನೀನೇ ಪ್ರಾಣಗಳೊಂದಿಗೆ ಸಮಸ್ತ ಶರೀರದಲ್ಲೂ ನೆಲಸಿರುವೆ. ಹವಿಸ್ಸನ್ನು ದೇವತೆಗಳಿಗೆ ತಲುಪಿಸುವ ಶ್ರೇಷ್ಠವಾಹಕನೂ ನೀನೇ ಆಗಿರುವೆ. ಸಮಸ್ತವೂ ನಿನ್ನ ವಶವಾಗಿರುವುದು; ನಮ್ಮನ್ನು ರಕ್ಷಿಸು.” ಹೀಗೆ ಪಂಚಭೂತಗಳು ಮತ್ತು ಇಂದ್ರಿಯಗಳು ಅತ್ಯಂತ ವಿನಯದಿಂದ ಪ್ರಾಣನ ಶ್ರೇಷ್ಠತೆಯನ್ನು ಕೊಂಡಾಡುತ್ತವೆ.

**ಮೂರನೆಯ ಪ್ರಶ್ನೆ:** ಕೌಸಲ್ಯ ಆಶ್ವಲಾಯನನು ಮೂರನೆಯ ಪ್ರಶ್ನೆಯನ್ನು ಕೇಳಿದನು: **“ಪೂಜ್ಯರೆ, ಪ್ರಾಣನು ಯಾವುದರಿಂದ ಹುಟ್ಟುವನು? ಶರೀರಕ್ಕೆ ಆತನು ಬರುವುದು ಹೇಗೆ? ತನ್ನನ್ನು ತಾನು ಹೇಗೆ ವಿಭಜಿಸಿಕೊಂಡಿರುವನು? ಯಾವುದರಿಂದ ಉತ್ಕ್ರಮಿಸುವನು? ಬಾಹ್ಯ ಜಗತ್ತನ್ನು ಹೇಗೆ ಧರಿಸಿರುವನು? ಒಳಗಿರುವುದನ್ನು ಹೇಗೆ ಧರಿಸಿರುವನು?”** ಈ ರೀತಿ ಕೌಸಲ್ಯ ಆಶ್ವಲಾಯನನು ಪರಸ್ಪರ ಸಂಬಂಧವಿರುವ ಹಲವಾರು ಪ್ರಶ್ನೆಗಳನ್ನು ಕೇಳುವನು.

ಇಲ್ಲಿ ಪ್ರತಿಯೊಬ್ಬ ಶಿಷ್ಯನೂ ಕೇಳುವ ಪ್ರಶ್ನೆ ಹಿಂದಿನ ಪ್ರಶ್ನೆಗೆ ಪೂರಕವಾಗಿರುವುದನ್ನು ಗಮನಿಸಬಹುದು. ಹಿಂದಿನ ಪ್ರಶ್ನೆಯಲ್ಲಿ ಪ್ರಾಣದ ಶ್ರೇಷ್ಠತ್ವದ ಅರಿವಾದರೂ ಪರತತ್ತ್ವದ ಅರಿವು ಉಂಟಾಗಿರುವುದಿಲ್ಲ. ಅದನ್ನು ದೃಢಪಡಿಸಿಕೊಳ್ಳಲು ಪ್ರಸ್ತುತ ಪ್ರಶ್ನೆ ಮೂಡಿಬಂದಿದೆ. ಆಗ ಗುರುವು, “ನೀನು ಅತಿಯಾಗಿ ಪ್ರಶ್ನೆಗಳನ್ನು ಕೇಳುತ್ತಿರುವೆ. ಆದರೂ, ನೀನು ಬ್ರಹ್ಮನನ್ನು ಅರಿತಿರುವುದರಿಂದ ನಿನಗೆ ಉತ್ತರಿಸುತ್ತೇನೆ” ಎನ್ನುತ್ತಾರೆ. ವಿಷಯವನ್ನು ಆಳವಾಗಿ ತಿಳಿಯಬೇಕೆಂಬ ಹಂಬಲವಿರುವ ಶಿಷ್ಯನು ಸೂಕ್ಷ್ಮವಾದ ಪ್ರಶ್ನೆಗಳನ್ನು ಕೇಳುತ್ತಾನೆ. ಜಿಜ್ಞಾಸುವಿನ ಪ್ರಶ್ನೆಗೆ ಗುರುವು ಸಂತೋಷಿಸುವನು. ಯಾವಾಗ ಕುತೂಹಲದಿಂದ ಶಿಷ್ಯನು ಪ್ರಶ್ನೆ ಕೇಳಲು ಉದ್ಯುಕ್ತನಾಗುವನೋ ಆಗ ಹೆಚ್ಚು ಹೆಚ್ಚು ವಿಷಯವನ್ನು ತಿಳಿಯಲು ಸಾಧ್ಯವಾಗುತ್ತದೆ.

ಪಿಪ್ಪಲಾದರು ಹೀಗೆ ಉತ್ತರಿಸುವರು: ಆತ್ಮನಿಂದಲೇ ಪ್ರಾಣವು ಹುಟ್ಟುವುದು. ನೆರಳು ಶರೀರವನ್ನು ಸರ್ವದಾ ಹೇಗೆ ಅವಲಂಬಿಸಿರುತ್ತದೋ ಅದೇ ರೀತಿ ಪ್ರಾಣವು ಸರ್ವದಾ ಸತ್ಯ ಪುರುಷನಲ್ಲಿ ನೆಲೆಗೊಂಡಿರುವುದು. ಮನಸ್ಸಿನ ಸಂಕಲ್ಪಾದಿ ಅಂಶಗಳಿಂದ ಮುಖ್ಯಪ್ರಾಣನು ಶರೀರದಲ್ಲಿ ಪ್ರವೇಶಿಸುವನು. ರಾಜನು ಒಂದೊಂದು ಪ್ರಾಂತ್ಯಕ್ಕೆ ಒಬ್ಬೊಬ್ಬ ಅಧಿಕಾರಿಯನ್ನು ನೇಮಿಸುವಂತೆ, ಮುಖ್ಯಪ್ರಾಣನು ಉಳಿದ ಪ್ರಾಣಗಳನ್ನು ವಿಭಜಿಸಿರುವನು. ಹೃದಯದಲ್ಲಿ ಆತ್ಮನು ನೆಲಸಿರುವನು. ಪ್ರಾಣ, ಅಪಾನ, ಉದಾನ, ಸಮಾನ, ವ್ಯಾನಗಳು ತಮ್ಮ ತಮ್ಮ ನಿರ್ದಿಷ್ಟ ಕಾರ್ಯಗಳಲ್ಲಿ ಮಗ್ನವಾಗಿರುವುವು.

ಇಲ್ಲಿ ಅಧಿಕಾರ ವಿಕೇಂದ್ರೀಕರಣವೆಂಬ ಸಾಮಾಜಿಕ ವ್ಯವಸ್ಥೆಯನ್ನು ಗಮನಿಸಬಹುದು. ಉಪನಿಷತ್ತಿನ ಋಷಿಗಳು ಆತ್ಮಸಾಕ್ಷಾತ್ಕಾರದ ಜೊತೆಗೆ ಲೌಕಿಕ ಬದುಕಿನ ಸಮಸ್ತ ವ್ಯವಹಾರಗಳನ್ನೂ ಅರಿತಿದ್ದರು; ದಿನನಿತ್ಯ ಎಲ್ಲರ ಅನುಭವಕ್ಕೆ ಬರುವ ಉದಾಹರಣೆಗಳನ್ನು ನೀಡಿದರೆ ಗಹನವಾದ ವಿಷಯ ಕೂಡ ಸುಲಭಗ್ರಾಹ್ಯವಾಗುತ್ತದೆ ಎಂಬ ಸರಳ ನೀತಿಯನ್ನು ಅನುಸರಿಸುವ ಉತ್ತಮ ಬೋಧಕರೂ ಆಗಿದ್ದರು.

ತಾನು ಯಾವ ರೀತಿಯ ಚಿತ್ತದಿಂದ ಕೂಡಿರುವುದೋ ಅದಕ್ಕೆ ಅನುಗುಣವಾಗಿ ಜೀವಿಯು ಪ್ರಾಣವನ್ನು ಕೂಡ ಪಡೆದುಕೊಳ್ಳುತ್ತದೆ. ಅನಂತರ ಪ್ರಾಣವು ತೇಜಸ್ಸಿನ ಒಡಗೂಡಿ ಆತ್ಮಸಂಕಲ್ಪದೊಂದಿಗೆ ತನ್ನ ಕರ್ಮಗಳಿಗೆ ಅನುಗುಣವಾದ ಲೋಕಕ್ಕೆ ಜೀವಿಯನ್ನು ಒಯ್ಯುವುದು. ಈ ರೀತಿ ಪ್ರಾಣವನ್ನು ಅರಿತವರು ಅಮೃತತ್ತ್ವವನ್ನು ಪಡೆಯುವರು.

**ನಾಲ್ಕನೆಯ ಪ್ರಶ್ನೆ:** ಅನಂತರ ಸೌರ್ಯಾಯಣಿ ಗಾರ್ಗ್ಯನು ಪ್ರಶ್ನಿಸುತ್ತಾನೆ: **“ಪೂಜ್ಯರೆ, ಈ ಪುರುಷನಲ್ಲಿ ಯಾವುವು ನಿದ್ರಿಸುವುವು? ಯಾವುವು ಎಚ್ಚೆತ್ತಿರುವುವು? ಸ್ವಪ್ನವನ್ನು ಕಾಣುವವರಾರು? ಯಾರಿಗೆ ಈ ಸುಖವು ಉಂಟಾಗುವುದು? ಯಾರಲ್ಲಿ ಎಲ್ಲವೂ ಒಂದಾಗುವುದು ?”**

ಯಾವುದು ಶಾಶ್ವತ ಸ್ವರೂಪವೋ ಆ ತತ್ತ್ವದ ಅರಿವು ಇಲ್ಲಿ ಉಂಟಾಗುತ್ತದೆ. ಇದಕ್ಕೆ ಗುರುಗಳ ಉತ್ತರ ಈ ರೀತಿಯಿದೆ: ಸೂರ್ಯನು ಅಸ್ತಂಗತನಾಗುವಾಗ, ಆತನ ಸಮಸ್ತ ಕಿರಣಗಳೂ ಆತನಲ್ಲಿಯೇ ಲೀನವಾಗುತ್ತವೆ. ಹಾಗೆಯೇ, ಅವನು ಪುನಃ ಉದಯಿಸುವಾಗ ಸಮಸ್ತ ಕಿರಣಗಳೂ ಪ್ರಕಟವಾಗಿ ಹೊರಗೆ ಪ್ರಸರಿಸುತ್ತವೆ. ಅದೇ ರೀತಿ ಸಕಲ ವಿಷಯಗಳೂ, ಇಂದ್ರಿಯಗಳೂ ಮನಸ್ಸಿನಲ್ಲಿ ಒಂದಾಗುತ್ತವೆ. ಆಗ ಪುರುಷನು

ಪ್ರತ್ಯೇಕವಾಗಿ ಏನನ್ನೂ ಅನುಭವಿಸುವುದಿಲ್ಲವಾದ್ದರಿಂದ ಅವನು ನಿದ್ರಿಸಿದ್ದಾನೆ ಎಂದು ವ್ಯವಹಾರದ ಭಾಷೆಯಲ್ಲಿ ಹೇಳಿಕೊಳ್ಳುತ್ತೇವೆ. ಆ ಸಮಯದಲ್ಲಿಯೂ ಪ್ರಾಣಾಗ್ನಿಗಳು ಈ ಶರೀರದಲ್ಲಿ ಎಚ್ಚರವಾಗಿಯೇ ಇರುವುವು. ಮನಸ್ಸೇ ಸ್ವಪ್ನವನ್ನು ಕಾಣುವುದು. ಸುಷುಪ್ತಿಯ ಸಮಯದಲ್ಲಿ ಜೀವನು ಸುಖವನ್ನು ಅನುಭವಿಸುವನು. ಸಮಸ್ತವೂ ಆತ್ಮನಲ್ಲಿ ನೆಲೆಸಿರುವುವು. ಪಂಚಭೂತಗಳು, ಪಂಚ ತನ್ಮಾತ್ರೆಗಳು, ವಿಷಯಗಳು, ಇಂದ್ರಿಯಗಳು, ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ – ಎಲ್ಲವೂ ಆತ್ಮನಲ್ಲಿ ನೆಲೆಸಿರುವುವು. ಈ ಆತ್ಮತತ್ತ್ವವನ್ನು ಯಾರು ಅರಿಯುತ್ತಾರೋ ಅವರು ಜ್ಞಾನವನ್ನು ಪಡೆದು ಸರ್ವಜ್ಞರಾಗುವರು.

ದೇಹೇಂದ್ರಿಯ ಪ್ರಜ್ಞೆಯನ್ನು ಮೀರಿ, ಅಂತರ್ದೃಷ್ಟಿಯನ್ನು ಬೆಳೆಸಿಕೊಂಡು ಶಾಂತಸ್ವರೂಪವಾದ ಆತ್ಮಜ್ಞಾನವನ್ನು ಪಡೆಯಬೇಕು. ಆ ಆತ್ಮಜ್ಞಾನವೊಂದೇ ಮುಕ್ತಿಗೆ ಸೋಪಾನ ಎಂಬ ಅಂಶ ಇಲ್ಲಿ ದೃಢವಾಗುತ್ತದೆ.

**ಐದನೆಯ ಪ್ರಶ್ನೆ:** ಅನಂತರ ಶೈಬ್ಯ ಸತ್ಯಕಾಮನು ಪ್ರಶ್ನಿಸುವನು: **"ಪೂಜ್ಯರೆ, ಮರಣದವರೆಗೂ ಓಂಕಾರವನ್ನು ಉಪಾಸಿಸುವವನು ಯಾವ ಲೋಕವನ್ನು ಪಡೆಯುವನು?"**

ಪ್ರಣವೋಪಾಸನೆಯ ಮಹತ್ವ ಇಲ್ಲಿ ವ್ಯಕ್ತವಾಗುತ್ತದೆ. ಈ ಪ್ರಶ್ನೆಗೆ ಗುರುಗಳು, ಓಂಕಾರವನ್ನು 'ಪರಬ್ರಹ್ಮ', 'ಅಪರಬ್ರಹ್ಮ' ಎಂಬ ಎರಡು ಹೆಸರಿನಿಂದಲೂ ನಿರ್ದೇಶಿಸಲಾಗಿದೆ ಎಂದು ಉತ್ತರ ಕೊಡುವರು. ಹಾಗೆಯೇ, **ಅ, ಉ, ಮ** ಎಂಬ ಮೂರು ಮಾತ್ರೆಗಳಲ್ಲಿ ಒಂದೊಂದು ಮಾತ್ರೆಯನ್ನು ಉಪಾಸಿಸಿದರೆ ಸಿಗುವ ಪ್ರಯೋಜನಗಳನ್ನು ಕ್ರಮವಾಗಿ ತಿಳಿಸುತ್ತಾ, ಮೂರು ಮಾತ್ರೆಗಳುಳ್ಳ ಓಂಕಾರದ ಉಪಾಸನೆಯಿಂದ ಸೂರ್ಯಲೋಕ ಪ್ರಾಪ್ತಿಯಾಗುತ್ತದೆ ಎಂದು ಬೋಧಿಸುವರು. ಅಧ್ಯಾತ್ಮದ ಉತ್ತುಂಗ ಫಲವಾದ ಮೋಕ್ಷಪ್ರಾಪ್ತಿಗೆ ಇರುವ ಉತ್ತಮ ಸಾಧನೆಯೆಂದರೆ ಈ ಪ್ರಣವೋಪಾಸನೆಯೇ ಆಗಿದೆ ಎನ್ನುವುದು ಇದರಿಂದ ಗೊತ್ತಾಗುವುದು.

**ಆರನೆಯ ಪ್ರಶ್ನೆ:** ಅನಂತರ ಸುಕೇಶ ಭಾರದ್ವಾಜನು ಪ್ರಶ್ನಿಸುವನು, **"ಹದಿನಾರು ಕಲೆಗಳುಳ್ಳ ಪುರುಷನಾರು, ಅವನೆಲ್ಲಿರುವನು?"** ಈ ಪ್ರಶ್ನೆ ಮೂಡಿಬರಲು ಕಾರಣ ಇದು: ಒಮ್ಮೆ ಕೋಸಲ ದೇಶದ ರಾಜಪುತ್ರನಾದ ಹಿರಣ್ಯನಾಭನು ಸುಕೇಶ ಭಾರದ್ವಾಜನ ಬಳಿ ಬಂದು, "ಹದಿನಾರು ಕಲೆಗಳುಳ್ಳ ಪುರುಷನನ್ನು ನೀನು ತಿಳಿದಿರುವೆಯಾ?" ಎಂದು ಪ್ರಶ್ನಿಸುವನು. "ನನಗೆ ತಿಳಿದಿಲ್ಲ" ಎಂದು ಸತ್ಯವನ್ನು ಹೇಳಿದ ಸುಕೇಶ ಭಾರದ್ವಾಜನು ಅದಕ್ಕೆ ಉತ್ತರವನ್ನು ಅರಸುತ್ತಾ, ಪಿಪ್ಪಲಾದರ ಬಳಿಗೆ ಬಂದಿರುವನು. ಈ ಪ್ರಶ್ನೆಗೆ ಗುರುಗಳು ಹೀಗೆ ಉತ್ತರಿಸುವರು:

"ಯಾರಲ್ಲಿ ಈ ಹದಿನಾರು ಕಲೆಗಳು ಉತ್ಪನ್ನವಾಗುವವೋ ಆ ಪುರುಷನು ಈ ಶರೀರದಲ್ಲೇ ಇರುವನು. ಆ ಪುರುಷನಿಂದಲೇ ಪ್ರಾಣ, ಶ್ರದ್ಧೆ, ಪಂಚಭೂತಗಳು, ಇಂದ್ರಿಯ, ಮನಸ್ಸು, ಅನ್ನ, ವೀರ್ಯ, ತಪಸ್ಸು, ಕರ್ಮಗಳು, ಲೋಕಗಳು ಹೀಗೆ ಸಮಸ್ತವೂ ಸೃಷ್ಟಿಯಾಗಿರುವುವು. ಎಲ್ಲ ಕಲೆಗಳೂ ಪುರುಷನಲ್ಲಿಯೇ ವಿಲೀನವಾಗುವುವು. ಆಗ ಹೊರಗಿನ ನಾಮರೂಪಗಳೆಲ್ಲವೂ ನಾಶವಾಗುವುವು. ಆ ಪರಮಪುರುಷನೊಬ್ಬನನ್ನು ಅರಿತರೆ ಮೃತ್ಯುವಿನ ಭಯ ಉಂಟಾಗುವುದಿಲ್ಲ.

ಈ ರೀತಿ ಗುರುವಿನಿಂದ ಅನುಗೃಹೀತರಾದ ಶಿಷ್ಯರು ಆತನನ್ನು ಪೂಜಿಸಿ, "ನಮ್ಮನ್ನು ಅವಿದ್ಯೆಯಿಂದ ಪಾರುಮಾಡಿದ್ದೀರಿ" ಎಂದು ವಿನಯಪೂರ್ವಕವಾಗಿ ನಿವೇದಿಸಿ, ನಮಸ್ಕರಿಸುತ್ತಾರೆ.

ಚಿನ್ನದ ತತ್ತ್ವವೊಂದನ್ನು ಅರಿತರೆ ಅದರಿಂದ ತಯಾರಿಸಲ್ಪಡುವ ಎಲ್ಲ ಆಭರಣಗಳ ಸ್ವರೂಪದ ಅರಿವೂ ತಾನಾಗಿಯೇ ಉಂಟಾಗುತ್ತದೆ. ಮಣ್ಣಿನ ತತ್ತ್ವವನ್ನು ಅರಿತರೆ ಅದರಿಂದ ನಿರ್ಮಿಸಲಾಗುವ ಎಲ್ಲ ಪದಾರ್ಥಗಳ ತತ್ತ್ವದ ಅರಿವೂ ಉಂಟಾಗುತ್ತದೆ. ಹಾಗೆಯೇ ಯಾವುದೇ ವಿಷಯದ ಸಮಗ್ರ ಅರಿವು ಉಂಟಾಗಬೇಕಾದರೆ ಅದರ ಮೂಲಕ್ಕೆ ಹೋಗಬೇಕು. ಸೃಷ್ಟಿಯ ಮೂಲತತ್ತ್ವವಾದ ಪರಬ್ರಹ್ಮವನ್ನು ಅರಿತವನು ಪರಬ್ರಹ್ಮಸ್ವರೂಪಿಯೇ ಆಗುವನು.

ಉಪನಿಷತ್ತುಗಳ ಉದ್ದೇಶ ತತ್ತ್ವಜಿಜ್ಞಾಸೆಯೊಡನೆ ಪಾರಮಾರ್ಥಿಕ ಜ್ಞಾನದ ಅರಿವನ್ನು ಉಂಟುಮಾಡುವುದೇ ಆಗಿದೆ. ಉಪನಿಷತ್ತಿನ ಋಷಿಗಳು ಲೌಕಿಕ ಬದುಕನ್ನು ನಿರಾಕರಿಸುತ್ತಿರಲಿಲ್ಲ; ಲೌಕಿಕ ಬದುಕನ್ನು ಸಾರ್ಥಕಗೊಳಿಸುವ ಆಧ್ಯಾತ್ಮಿಕ ಮಾರ್ಗಗಳನ್ನು ಉಪದೇಶಿಸುತ್ತಿದ್ದರು. **'ಸಾ ವಿದ್ಯಾ ಯಾ ವಿಮುಕ್ತಯೇ'** ಎಂಬ ಮಾತಿನಂತೆ, ಮುಕ್ತಿಯನ್ನು ದೊರಕಿಸಿಕೊಡುವ ವಿದ್ಯೆಯೇ ನಿಜವಾದ ವಿದ್ಯೆ ಎಂದರಿತು ಆ ವಿದ್ಯಾಪ್ರಾಪ್ತಿಗೆ ಋಷಿಗಳು ಹೆಚ್ಚಿನ ಮಹತ್ವವನ್ನು ನೀಡಿದ್ದರು. ಬ್ರಹ್ಮಜ್ಞಾನವೇ ಶಾಶ್ವತವಾದ ಫಲವನ್ನೀಯುವ ಸಂಪತ್ತು ಎಂಬುದನ್ನು ಅವರು ಸಾಧಿಸಿ ತೋರಿಸಿರುವರು. ಈ ಸಂಪತ್ತಿನ ಗಳಿಕೆಯೇ ಮಾನವ ಜೀವನದ ಶ್ರೇಷ್ಠ ಗುರಿಯಾಗಿರುವುದು.

## ಉಪನಿಷತ್ತುಗಳ ವೈಶಿಷ್ಟ್ಯ

**ಛಂದೋಬದ್ಧವಾಗಿರುವ ಸೃಷ್ಟಿ ಸ್ಥಿತಿ ಲಯಗಳು, ಲೌಕಿಕ ಪ್ರತ್ಯಕ್ಷಕ್ಕೆ ಮೀರಿರುವ ಜಗತ್ತಿನ ವಿಸ್ತೃತಿ ಇತ್ಯಾದಿ ಈಶ್ವರನ ಅನಂತ ವೈಭವವನ್ನು ಸಂಹಿತಾ ವಾಕ್ಯಗಳು ಪ್ರತಿಪಾದಿಸುತ್ತವೆ. ಈ ಪ್ರಶಂಸೆಯನ್ನೂ ಸೇರಿಸಿ ಅದರ ಜೊತೆಯಲ್ಲೇ, ಪರತತ್ತ್ವದ ದಿವ್ಯವೈಭವವನ್ನರಿತು ಅದರ ಸೌಂದರ್ಯ ಸಾಕ್ಷಾತ್ಕಾರ ಮಾಡಿಕೊಳ್ಳುವ ಆತ್ಮದ ಶಕ್ತಿ ಸ್ವರೂಪಗಳನ್ನೂ ಉಪನಿಷತ್ತುಗಳು ವರ್ಣಿಸುತ್ತವೆ. ಅನಂತವಾದ ಬಾಹ್ಯ ಜಗತ್ತಿನಲ್ಲಿ ಯಾವ ಯಾವ ದಿವ್ಯ ವೈಭವಗಳಿವೆಯೋ ಅವೆಲ್ಲ ಅವುಗಳನ್ನು ಅನುಭವಿಸುವ, ಆನಂದಿಸುವ ಆತ್ಮನಲ್ಲಿಯೂ ಪ್ರಕಾಶಿಸುತ್ತವೆ ಎಂಬ ಅದ್ವೈತತತ್ತ್ವಪ್ರತಿಪಾದನೆಯೇ ಉಪನಿಷತ್ತುಗಳ ವೈಶಿಷ್ಟ್ಯ**

**– ಶ್ರೀ ಜಿ.ಎಸ್. ಚಕ್ರವರ್ತಿ**

**(ಆಧಾರ: ಋಕ್ಸಂಹಿತಾಸಾರ)**



## ಸ್ವಾಮಿ ವಿವೇಕಾನಂದರು ನಿರೂಪಿಸಿದ

# ನೀತಿಕಥೆಗಳು



ಡಾ. ಕೆ. ಅನಂತರಾಮು

## ದೊಡ್ಡವರು ಯಾರು

ಸನಾತನ ಧರ್ಮಪರಂಪರೆಯಲ್ಲಿ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸಂನ್ಯಾಸ ಎಂಬ ನಾಲ್ಕು ಆಶ್ರಮಧರ್ಮಗಳಿವೆ. ಬ್ರಹ್ಮಚರ್ಯದಿಂದ ಜೀವನಯಾತ್ರೆ ಪ್ರಾರಂಭವಾದರೆ, ವಿವಾಹಿತನಾದಮೇಲೆ ಗೃಹಸ್ಥನೆನಿಸುತ್ತಾನೆ. ಈ ಪ್ರಸ್ತುತ ಪರಿಸ್ಥಿತಿಯಲ್ಲಿ ವಾನಪ್ರಸ್ಥ ಮತ್ತು ಸಂನ್ಯಾಸಗಳು ಕಳಚಿಹೋಗಿವೆ. ಆದರೆ ಬ್ರಹ್ಮಚರ್ಯದಿಂದಲೇ ನೇರವಾಗಿ ಸಂನ್ಯಾಸಿಗಳಾಗುವ ಒಂದು ವರ್ಗವು ಈಗಲೂ ಇದೆ. ಗೃಹಸ್ಥ ಮತ್ತು ಸಂನ್ಯಾಸಿಗಳ ನಡುವೆ ಯಾರೂ ಹೆಚ್ಚಲ್ಲ, ಯಾರೂ ಕಡಿಮೆಯೂ ಅಲ್ಲ. ಗೃಹಸ್ಥರು ಮದುವೆಮಾಡಿಕೊಂಡು ಸಂಸಾರದ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ. ಸಂನ್ಯಾಸಿಗಳಾದರೋ ಈಶ್ವರೋಪಾಸನೆಯನ್ನು ಮಾಡುತ್ತಾ, ಧರ್ಮಕಾರ್ಯಗಳಲ್ಲಿ ತಮ್ಮ ಸರ್ವಶಕ್ತಿಯನ್ನೂ ವಿನಿಯೋಗಿಸುತ್ತಾರೆ. ಗೃಹಸ್ಥನು ತನ್ನ ದೇಶಕ್ಕಾಗಿ ಅಥವಾ ತನ್ನ ಧರ್ಮಕ್ಕಾಗಿ ಮಡಿದರೆ, ಯೋಗಿಯಾದ ಸಂನ್ಯಾಸಿ ಧ್ಯಾನದಿಂದ ಪಡೆಯುವ ಪದವಿಯನ್ನೇ ತಾನೂ ಹೊಂದುತ್ತಾನೆ. ಕರ್ತವ್ಯಗಳಲ್ಲಿ ಮೇಲುಕೀಳುಗಳಿಲ್ಲ; ಒಬ್ಬನ ಕರ್ತವ್ಯ ಮತ್ತೊಬ್ಬನದಲ್ಲ; ಪ್ರತಿಯೊಂದು ಕರ್ತವ್ಯಕ್ಕೂ ತನ್ನದೇ ಆದ ಸ್ಥಾನವಿದೆ.

ಪುರಾತನಕಾಲದಲ್ಲಿ ಗಾಂಧಾರದೇಶದಲ್ಲಿ ಚಂದ್ರವರ್ಮನೆಂಬ ದೊರೆಯು ರಾಜ್ಯವಾಳುತ್ತಿದ್ದನು. ಸಂನ್ಯಾಸಿಯು ಶ್ರೇಷ್ಠನೋ ಗೃಹಸ್ಥನು ಶ್ರೇಷ್ಠನೋ ಎಂಬೊಂದು ಪ್ರಶ್ನೆ ಅವನನ್ನು ಭೂತದಂತೆ ಸದಾಕಾಲ ಕಾಡುತ್ತಿತ್ತು. ಯಾರು ತಿಳಿಯಹೇಳಿದರೂ ಅವನಿಗೆ ಸಮಾಧಾನವಾಗುತ್ತಿರಲಿಲ್ಲ. ಚಂದ್ರವರ್ಮನು ತನ್ನ ರಾಜಧಾನಿಗೆ ಆಗಮಿಸುತ್ತಿದ್ದ ಸಂನ್ಯಾಸಿಗಳನ್ನೆಲ್ಲ ತನ್ನ ಅರಮನೆಗೂ ಬರಮಾಡಿಕೊಂಡು ಅವರನ್ನು ಸತ್ಕರಿಸುತ್ತಿದ್ದನು. ತರುವಾಯ ಅವರನ್ನು ಕುರಿತು, "ಸಂನ್ಯಾಸಿಯು ಶ್ರೇಷ್ಠನೋ ಗೃಹಸ್ಥನು ಶ್ರೇಷ್ಠನೋ ಎಂಬೊಂದು ಪ್ರಶ್ನೆ ನನ್ನನ್ನು ಕೊರೆಯುತ್ತಿದೆ. ಇದಕ್ಕೆ ನೀವು ಉತ್ತರಿಸಬೇಕು" ಎನ್ನುತ್ತಿದ್ದನು. ಆಗ ಕೆಲವರು, "ಗೃಹಸ್ಥನಿಗಿಂತ ಸಂನ್ಯಾಸಿಯೇ ಶ್ರೇಷ್ಠ" ಎಂದು ಉತ್ತರಿಸುತ್ತಿದ್ದರು. ಅದಕ್ಕೆ ದೊರೆಯು, "ಹಾಗಾದರೆ ಸಂನ್ಯಾಸಿಯು ಶ್ರೇಷ್ಠನೆಂಬುದನ್ನು ಪ್ರಮಾಣಪೂರ್ವಕವಾಗಿ ಸಾಬೀತುಪಡಿಸಿ" ಎಂದು ಸವಾಲೊಡ್ಡುತ್ತಿದ್ದನು. ಆಗ ಅವರು, "ಸಂನ್ಯಾಸಿ ಸರ್ವಸ್ವವನ್ನೂ ತ್ಯಾಗಮಾಡಿ ಮೋಕ್ಷಕ್ಕಾಗಿ, ಲೋಕಹಿತಕ್ಕಾಗಿ ತನ್ನನ್ನು ಸಮರ್ಪಿಸಿಕೊಳ್ಳುತ್ತಾನಾದ್ದರಿಂದ ಅವನೇ ಶ್ರೇಷ್ಠ ಎಂದು ನಮ್ಮ ಅಭಿಪ್ರಾಯವನ್ನು ತಿಳಿಸುತ್ತಿದ್ದೇವೆಯೇ ಹೊರತು, ಅದನ್ನು ಸಾಧಿಸಿ ತೋರಿಸುವುದು ನಮ್ಮಿಂದ ಸಾಧ್ಯವಿಲ್ಲ" ಎಂದು ತಮ್ಮ ಅಸಹಾಯಕತೆಯನ್ನು ತೋಡಿಕೊಳ್ಳುತ್ತಿದ್ದರು. ಅದಕ್ಕೆ ಪ್ರತಿಯಾಗಿ ಚಂದ್ರವರ್ಮನು, "ಸಂನ್ಯಾಸಿಯು ಹೇಗೆ ಶ್ರೇಷ್ಠನೆಂಬುದನ್ನು ನೀವು ಸಂನ್ಯಾಸಿಗಳಾಗಿಯೂ ಸಾಧಿಸಿತೋರಿಸಲಾರದೆ ಹೋದಿರಿ. ಆದ್ದರಿಂದ ನೀವು ಸಂನ್ಯಾಸವನ್ನು ತೊರೆದು, ಮದುವೆಮಾಡಿಕೊಂಡು ಗೃಹಸ್ಥರಾಗಿ" ಎಂದು ಆಜ್ಞೆಮಾಡುತ್ತಿದ್ದನು. ಆ ಸಂನ್ಯಾಸಿಗಳ ಪೈಕಿ ಯಾರಾದರೂ "ಸಂನ್ಯಾಸಿಗಿಂತ ಗೃಹಸ್ಥನೇ ಶ್ರೇಷ್ಠ" ಎಂದು ಉತ್ತರ ಹೇಳಿದರೆ ಅವರಿಗೂ ಕಷ್ಟ ತಪ್ಪುತ್ತಿರಲಿಲ್ಲ. "ಹಾಗಾದರೆ ಗೃಹಸ್ಥನೇ ಹೇಗೆ ದೊಡ್ಡವನೆಂಬುದನ್ನು ಪ್ರಮಾಣಪೂರ್ವಕವಾಗಿ ಸಿದ್ಧಪಡಿಸಿ" ಎಂದು ಗಂಟುಬೀಳುತ್ತಿದ್ದನು. "ಅನ್ನಾಹಾರಗಳಿಗಾಗಿ ಸಂನ್ಯಾಸಿಗಳು ಕೂಡ ಗೃಹಸ್ಥರನ್ನೇ ಆಶ್ರಯಿಸಬೇಕೆಂಬ ಹಿನ್ನೆಲೆಯಲ್ಲಿ, ಸಂನ್ಯಾಸಿಗಳಾಗುವವರು ಕೂಡ ಗೃಹಸ್ಥರ ಹೊಟ್ಟೆಯಿಂದಲೇ ಹುಟ್ಟಿಬರಬೇಕೆಂಬ ಹಿನ್ನೆಲೆಯಲ್ಲಿ ನಾವು ಗೃಹಸ್ಥರೇ ಶ್ರೇಷ್ಠ ಎಂದು ನಮ್ಮ ಅಭಿಪ್ರಾಯವನ್ನು ಹೇಳಿದೆವೇ ಹೊರತು ಅದನ್ನು ಸಾಧಿಸಿ ತೋರಿಸುವುದು ನಮ್ಮಿಂದಾಗದು" ಎಂದು ಸೋಲೊಪ್ಪಿಕೊಳ್ಳುತ್ತಿದ್ದರು. ಅದಕ್ಕೆ ದೊರೆಯು, "ನೀವು ವಿವಾಹಿತರಾಗಿ ಗೃಹಸ್ಥರಾಗಿ, ಆ ಅನುಭವವನ್ನು ಪಡೆದುಕೊಳ್ಳಿ" ಎಂದು ಆಜ್ಞಾಪಿಸುತ್ತಿದ್ದನು. ಯಾರ ಪರವಾಗಿ ಹೇಳಿದರೂ ಆ ಸಂನ್ಯಾಸಿಗಳು, ಗೃಹಸ್ಥರಾಗಬೇಕೆಂಬ ಪೀಕಲಾಟಕ್ಕೆ ತುತ್ತಾಗುತ್ತಿದ್ದರು. ಆ ಹೊತ್ತಿನಲ್ಲಿ ಅವರು, "ಮಹಾರಾಜ, ನಾವು ಸಂನ್ಯಾಸಿಗಳು. ಈಗ ನಮಗ್ಯಾರು ಹೆಣ್ಣುಕೊಡುತ್ತಾರೆ? ನೀನೇ ಕನ್ಯೆಯರನ್ನು ಗೊತ್ತುಮಾಡಬೇಕು, ನೀನೇ ಮುಹೂರ್ತ ನಿಶ್ಚಯಿಸಬೇಕು, ನಿನ್ನ ನಗರದಲ್ಲಿಯೇ ವಿವಾಹವು ನೆರವೇರಬೇಕು. ಈಗ ನಮ್ಮೂರಿಗೆ ಹೋಗಿ ಗೃಹಸ್ಥರಾಗುವ ವಿಷಯವನ್ನು ತಿಳಿಸಿ, ಅಪ್ಪಣೆ ಪಡೆದು ಬಂದುಬಿಡುತ್ತೇವೆ" ಎಂದು ತಿಳಿಸಿ, ಅಲ್ಲಿಂದ ಕಾಲ್ತೆಗೆಯುತ್ತಿದ್ದರು.

ಹೀಗೆಯೇ ದಿನಗಳು ಉರುಳುತ್ತಿರುವಾಗ ಸತ್ಯಾನಂದನೆಂಬ ಸಂನ್ಯಾಸಿಯು ಅದೇ ಇಕ್ಕಟ್ಟಿಗೆ ಸಿಕ್ಕಿಬಿದ್ದನು. ಅವನಾದರೋ, "ಮಹಾರಾಜ, ಸಂನ್ಯಾಸಿಯು ಶ್ರೇಷ್ಠನೋ ಗೃಹಸ್ಥನು ಶ್ರೇಷ್ಠನೋ ಎಂಬ ನಿನ್ನ ಪ್ರಶ್ನೆಗೆ ಏಕಪಕ್ಷೀಯವಾದ ಉತ್ತರಕೊಡುವುದು ಸಾಧ್ಯವಿಲ್ಲ. ಅವರವರ ಸ್ಥಾನಮಾನಗಳಲ್ಲಿ ಅವರವರು ದೊಡ್ಡವರು, ಅದರಲ್ಲಿ ಹೆಚ್ಚು ಕಡಮೆಯೆಂಬ ತಾರತಮ್ಯವೇನೂ ಇಲ್ಲ" ಎಂದು

ತಿಳಿಯಹೇಳಿದನು. ಆ ಉತ್ತರದಿಂದಲೂ ತೃಪ್ತನಾಗದೆ ಚಂದ್ರ ವರ್ಮನು, "ನಿಮ್ಮ ಅಭಿಪ್ರಾಯವನ್ನು ಪ್ರಮಾಣಪೂರ್ವಕವಾಗಿ ಸಾಬೀತುಪಡಿಸಿ" ಎಂದು ಎಂದಿನಂತೆ ಬಲವಂತಪಡಿಸಿದನು. ಅದಕ್ಕೆ ಸತ್ಯಾನಂದನು, "ಸಾಧಿಸಿತೋರಿಸಬೇಕೆಂಬುದು ಕೂಡ ಈಗಿಂದೀಗಲೇ ಆಗಿಹೋಗುವ ಸಂಗತಿಯಲ್ಲ. ಅದು ಅನುಭವಕ್ಕೆ ಸಂಬಂಧಿಸಿದ ವಿಚಾರವಾಗಿದೆ. ಅದಕ್ಕೆ ತಕ್ಕಷ್ಟು ಕಾಲಾವಕಾಶ ಬೇಕು. ಅಷ್ಟು ಮಾತ್ರವಲ್ಲದೆ ನೀನು ಸ್ವಲ್ಪಕಾಲ ಅರಮನೆಯನ್ನು ತೊರೆದು ನನ್ನ ಬೆನ್ನಹಿಂದೆ ಬರಬೇಕು" ಎಂದನು. ನಿಜವಾದ ಜಿಜ್ಞಾಸುವಾಗಿದ್ದ ಚಂದ್ರವರ್ಮನು ಆಗಿಂದಾಗಲೇ ರಾಜ್ಯವನ್ನು ಮಂತ್ರಿಗಳಿಗೊಪ್ಪಿಸಿ ತಾನೊಬ್ಬ ಸಾಮಾನ್ಯ ಪುರುಷನಂತೆ, ಸತ್ಯಾನಂದನ ಅನುಚರನಾಗಿ ಹೊರಟೇಬಿಟ್ಟನು.

ಸತ್ಯಾನಂದನು ತನ್ನ ಮನಸ್ಸಿಗೆ ಬಂದ ದಿಕ್ಕಿನತ್ತ ನಡೆದು ಹೋಗುತ್ತಿದ್ದನು. ಚಂದ್ರವರ್ಮನು ಏನೊಂದೂ ಎದುರಾಡದೆ ಅವನ ಹಿಂಬಾಲಕನಾಗಿ ಸಾಗುತ್ತಿದ್ದನು. ಸಂನ್ಯಾಸಿಯು ಅನುಭವಿಸುವ ಕಷ್ಟಸುಖಗಳನ್ನೆಲ್ಲ ಮಹಾರಾಜನೂ ಅನುಭವಿಸಬೇಕಾಯಿತು. ಮಗಧ, ಕೋಸಲ, ಶೂರಸೇನಾದಿ ಹಲವು ರಾಜ್ಯಗಳನ್ನು ದಾಟಿದ ಬಳಿಕ, ಅವರು ಕಾಶ್ಮೀರವೆಂಬ ನಯನ ಮನೋಹರವಾದ ರಾಜ್ಯವನ್ನು ತಲುಪಿದರು. ಅಲ್ಲಿ ಮಿತ್ರವರ್ಮನೆಂಬ ವೃದ್ಧದೊರೆಯು ರಾಜ್ಯಭಾರ ಮಾಡುತ್ತಿದ್ದನು. ಅವನಿಗೆ ಇಂದುಮತಿಯೆಂಬ ಅತ್ಯಂತ ರೂಪಸಂಪನ್ನೆಯಾದ ಮಗಳಿದ್ದಳು. ಬೇರೆ ಸಂತಾನವಿರಲಿಲ್ಲ. ಅವಳು ಪ್ರಾಯಸಮರ್ಥೆಯಾಗಿ ಮದುವೆಗೆ ಸಿದ್ಧಳಾಗಿದ್ದಳು. ದೊರೆಯು ಅವಳಿಗಾಗಿ ಸ್ವಯಂವರವೊಂದನ್ನು ಏರ್ಪಡಿಸಿದ್ದನು. ಅದರ ಅಂಗವಾಗಿ ಪಟ್ಟಣವನ್ನೆಲ್ಲ ಬಹುಪ್ರಕಾರವಾಗಿ ಸಿಂಗರಿಸಿದ್ದರು. ಸ್ವಯಂವರ ಮಂಟಪವಂತೂ ನಯನಾಭಿರಾಮವಾಗಿ ಸಿಂಗಾರಗೊಂಡಿತ್ತು. ಹಲವು ದೇಶಗಳಿಂದ ಆಗಮಿಸಿದ್ದ ರಾಜಕುಮಾರರು ತಮತಮಗೆ ನಿಗದಿಯಾಗಿದ್ದ ಪೀಠಗಳಲ್ಲಿ ಕುಳಿತು, ರಾಜಕುಮಾರಿಯ ಆಗಮನವನ್ನೇ ನಿರೀಕ್ಷಿಸುತ್ತಿದ್ದರು. ಸತ್ಯಾನಂದನೂ ಚಂದ್ರವರ್ಮನೂ ಆ ವೈಭವವನ್ನೆಲ್ಲ ಬೆರಗಾಗಿ ನೋಡುತ್ತ, ಜನಸಮೂಹದ ನಡುವೆ ತಾವೂ ನಿಂತರು. ಆ ಮಂಟಪವಂತೂ ಭೇರಿನಾದದಿಂದಲೂ ಸಂಗೀತ ನೃತ್ಯಗಳ ಮೇಳದಿಂದಲೂ ಹೊಗಳುಭಟರ ಘೋಷಣೆಗಳಿಂದಲೂ ತುಂಬಿಹೋಗಿತ್ತು.

ರಾಜಕುಮಾರಿ ಇಂದುಮತಿಯು ಆಯ್ಕೆ ಮಾಡಿಕೊಳ್ಳುವ ವರನು, ವೃದ್ಧರಾಜನ ತರುವಾಯ ತಾನೇ ಸಿಂಹಾಸನವನ್ನೇರಿ ಆಳ್ವಿಕೆ ನಡೆಸುವ ಸಾಮರ್ಥ್ಯ ಪಡೆದಿರಬೇಕಾಗಿತ್ತು. ಅಷ್ಟು ಮಾತ್ರವಲ್ಲದೆ ಇಂದುಮತಿಯ ಮನಸ್ಸಿಗೊಪ್ಪುವಷ್ಟು ರೂಪಲಕ್ಷಣ ಸಂಪನ್ನನೂ ಆಗಿರಬೇಕಾಗಿತ್ತು. ಹೀಗಾಗಿ ಅವಳಿಗೆ ಅನುರೂಪನಾದ ವರನು ಲಭಿಸುವುದು ದುಸ್ತರವೇ ಆಗಿತ್ತು. ಇದೇನೂ ಅವಳಿಗೆ ಮೊದಲ ಸ್ವಯಂವರವಾಗಿರಲಿಲ್ಲ. ಈ ಮೊದಲೇ ನಾಲ್ಕಾರು ಸ್ವಯಂವರಗಳು ಏರ್ಪಾಡಾಗಿದ್ದರೂ ಅವಳ ನಿರೀಕ್ಷೆಗೆ ತಕ್ಕ ವರನು ದೊರೆತಿರಲಿಲ್ಲ. ಈ ಬಾರಿಯ ಸ್ವಯಂವರವಾದರೋ ಹೆಚ್ಚುಹೆಚ್ಚು ರಾಜಕುಮಾರರಿಂದ ತುಂಬಿದ್ದು, ಎಲ್ಲರಲ್ಲಿಯೂ ಹೊಸ ಭರವಸೆ ಮೂಡಿಸಿತ್ತು. ನಿಶ್ಚಿತ ಮುಹೂರ್ತಕ್ಕೆ ಸರಿಯಾಗಿ ಅರಮನೆಯ ಬೋಯಿಗಳು ಇಂದುಮತಿಯನ್ನು ಸಾಲಂಕೃತ ಪಲ್ಲಕ್ಕಿಯಲ್ಲಿ ಹೊತ್ತು, ರಾಜಕುಮಾರರು ಆಸೀನರಾಗಿದ್ದ ಪೀಠಗಳ ಸಾಲಿನಲ್ಲಿ ಮೆಲ್ಲಮೆಲ್ಲನೆ ಹೆಜ್ಜೆಯಿಡುತ್ತ ಸಾಗಿದರು. ರಾಜಕುಮಾರಿಯು ತನ್ನ ಕಣ್ಮನಗಳನ್ನು ಸೆಳೆದ ರಾಜಕುಮಾರನ ಕೊರಳಿಗೆ ತೊಡಿಸಲೆಂದು ತನ್ನ ಕೈಲೊಂದು ಸುಗಂಧಭರಿತ ಪುಷ್ಪಮಾಲಿಕೆಯನ್ನು ಹಿಡಿದಿದ್ದಳು. ರಾಜಕುಮಾರರ ಕಡೆಯ ವಂದಿಮಾಗಧರು ತಮ್ಮ ತಮ್ಮ ಒಡೆಯರ ಶೌರ್ಯಸಾಹಸಗಳನ್ನೂ ಸಿರಿಸಂಪದಗಳನ್ನೂ ಪ್ರತಿಭೆಪಾಂಡಿತ್ಯಗಳನ್ನೂ ಗುಣಗೌರವಗಳನ್ನೂ ಕೊಂಡಾಡುತ್ತಿದ್ದರು. ಆತನನ್ನು ವರಿಸುವುದರಿಂದುಂಟಾಗುವ ಸುಖಸಂತೋಷಗಳನ್ನೂ ಅನುಕೂಲ್ಯಗಳನ್ನೂ ಅದರೊಟ್ಟಿಗೇ ಹಾಡಿಹೊಗಳುತ್ತಿದ್ದರು. ಈ ಬಾರಿಯೂ ಇಂದುಮತಿಗೆ ಆ ರಾಜಕುಮಾರರ ಗುಂಪಿನಲ್ಲಿ ಯಾರೂ ಹಿಡಿಸಲಿಲ್ಲ. ಆಗ ಆ ರಾಜಕುಮಾರರ ಮುಖಗಳು ಕಳಾಹೀನವಾದುವು. ಅವರ ಆಸೆಗೆ ತಣ್ಣೀರು ಎರಚಿದಂತಾಯಿತು. "ಈ ರಾಜಕುಮಾರಿಯ ಹಣೆಬರಹವೇ ಇಷ್ಟು. ಅವಳು ಮೆಚ್ಚುವ ವರನು ಇಂದ್ರಲೋಕದಿಂದ ಇಳಿದುಬರಬೇಕಷ್ಟೇ" ಎಂದು ಕೆಲವರು ಗೊಣಗಾಡಿಕೊಳ್ಳುತ್ತಿದ್ದರು.

ಆ ಹೊತ್ತಿನಲ್ಲಿ ಆ ಸ್ವಯಂವರ ಮಂಟಪದಲ್ಲಿ ಸತ್ಯಾನಂದ ಚಂದ್ರವರ್ಮರಂತೆಯೇ, ಒಬ್ಬ ಯುವಸಂನ್ಯಾಸಿಯು ಕುತೂಹಲದ ಕಣ್ಣುಗಳಿಂದ ಅಲ್ಲಿನ ದೃಶ್ಯಾವಳಿಗಳನ್ನೆಲ್ಲ ವೀಕ್ಷಿಸುತ್ತಿದ್ದನು. ಆತನಾದರರೋ ನವಮನ್ಮಥನಂತೆ ಸರ್ವಲಕ್ಷಣಭರಿತನಾಗಿ ಕಂಗೊಳಿಸುತ್ತಿದ್ದನು. ಸೂರ್ಯನೇ ಭೂಮಿಗಿಳಿದುಬಂದನೋ, ಕಾಮದೇವನೇ ಸ್ವಯಂವರಮಂಟಪದಲ್ಲಿ ಪ್ರತ್ಯಕ್ಷನಾದನೋ ಎಂಬಂತೆ ಅವನು ಶೋಭಿಸುತ್ತಿದ್ದನು. ಜನಜಂಗುಳಿಯ ಯಾವುದೋ ಒಂದು ಮೂಲೆಯಲ್ಲಿ ಅವನು ನಿಂತಿದ್ದರೂ ಇಂದುಮತಿಯ ದೃಷ್ಟಿ ಅವನತ್ತ ಕೇಂದ್ರೀಕೃತವಾಯಿತು. ಮೊದಲ ನೋಟದಲ್ಲೇ ಅವಳು ಆ ಯುವಸಂನ್ಯಾಸಿಗೆ ತನ್ನನ್ನು ಪೂರ್ಣವಾಗಿ ಸಮರ್ಪಿಸಿಕೊಂಡುಬಿಟ್ಟಳು. ಬೋಯಿಗಳನ್ನು ಅತ್ತ ಸಾಗಲು ಹೇಳಿ, ಪಲ್ಲಕ್ಕಿಯಲ್ಲಿ ಕುಳಿತಿದ್ದಂತೆಯೇ ತನ್ನ ಕೈಲಿದ್ದ ಮಾಲೆಯನ್ನು ಅವನ ಕೊರಳಿಗೆ ಹಾಕಿಬಿಟ್ಟಳು. ಆಗಲೇ ಆತನು ಕಕ್ಕಾಬಿಕ್ಕಿಯಾಗಿ, "ಛೇ, ಇದೆಂತಹ ಅಕಾರ್ಯ, ಇಲ್ಲಿ ನೆರೆದಿರುವ ರಾಜಕುಮಾರರಲ್ಲಿ ಯಾರನ್ನಾದರೂ ಆಯ್ಕೆ ಮಾಡಿಕೊಳ್ಳುವುದನ್ನು ಬಿಟ್ಟು, ಸಂನ್ಯಾಸಿಯಾದ ನನ್ನ ಕೊರಳಿಗೆ ಮಾಲೆಹಾಕುವುದೇಕೆ" ಎಂದು ಸಿಡಿಮಿಡಿಗೊಂಡು ಆ ಹಾರವನ್ನು ತನ್ನ ಕೊರಳಿನಿಂದ ತೆಗೆದು ತೂರಿ ಎಸೆದನು; ಅದು ಪಲ್ಲಕ್ಕಿಯಲ್ಲಿದ್ದ ರಾಜಕುಮಾರಿಯ ಕೈಗೇ ಹೋಗಿಮುಟ್ಟಿತು. ಅದನ್ನು ನೋಡುತ್ತಿದ್ದ ವೃದ್ಧರಾಜನು, "ಆ ಯುವಕನು ಬಡವನಾಗಿರಬಹುದು. ಆದ್ದರಿಂದ ರಾಜಕುಮಾರಿಯನ್ನು ವರಿಸಲು ಹಿಂಜರಿಯುತ್ತಿರಬಹುದು" ಎಂದು ತನಗೆ ತಾನೇ ಭಾವಿಸಿಕೊಂಡು, "ಅಯ್ಯಾ ಯುವಕನೇ, ನೀನು ರಾಜಕುಮಾರಿಯ ಕೈಹಿಡಿದರೆ ನಿನಗೆ ನನ್ನ ಅರ್ಧರಾಜ್ಯವನ್ನೇ ಧಾರೆಯೆರೆಯುತ್ತೇನೆ; ಅಷ್ಟು ಮಾತ್ರವಲ್ಲ, ನನ್ನ ತರುವಾಯ